ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 29th June, 1977/Ashada, 8, 1899 S. E.

The House met in the Assembly Chamber, Vidhana Soudha, at One of the Clock.

[MADAM SPEAKER (SMT. K. S. NAGARATHNAMMA) in the Chair.]

STARRED QUESTIONS

(to which oral answers were given)

Absorption of Employees of Taluk Development Board

77. SRI M. M. SAJJAN (Muddebihal).—Will the Minister for Revenue be pleased to state:—

(*a*) whether it has come to the notice of Government that the Order dated 28th July 1976 regarding absorption to Taluk Board Employees has not been completely implemented;

(*b*) whether Government are aware that there is dearth of personnel in Revenue Department in various cadre, throughout the State;

(*c*) whether it has come to the notice of the Government that Land Tribunals in the State are very much handicapped to do their work as many vacant posts have not been filled up as yet;

(*d*) if so, the reason for not filling up the posts;

(*e*) whether Government intend to fill up all these vacant posts in Land Tribunals and in various sections of Revenue Department by withdrawing the services of Taluk Development Board Employees as per the G.O. cited in clause (*a*).?

SRI N. HUTCHAMASTHY GOWDA (Minister for Revenue).—

(*a*) No. The Taluk Development Board staff working in the districts as on 28th July 1976 have been treated as absorbed in the corresponding posts of Revenue Department as per Government Order No. RDC 52 SPL 76, dated 28th July 1976.

(*b*) Yes.

(c) Except the posts of 11 Dn. Clerks, all other posts have been filled up. These posts will be filled up after the receipt of the list of candidates selected by Karnataka Public Service Commission. However, instructions have been issued to the Deputy Commissioners to appoint local candidates drawn from S.Cs/S.Ts B.Ts till recruitment is finalised.

(d) The finanl list of candidates has not been received from the KPSC. Hence, these posts have not been filled up.

(e) Government have issued instructions to the Deputy Commissioners to transfer clerical staff of the Taluk Development Boards to the Land Reforms work temporarily till permanent arrangement is made.

SRI M. M. SAJJAN.—May I know why the Government Order is not yet completely implemented in view of reply to Para (a) of the question?

† ಶ್ರೀ ಎನ್. ಹಂಚ್ಯಮಾಸ್ತಿಗೌಡ.— ಕೋ ಅಪರೇಟೀವ್ ಮಂತ್ತು ರೂರಲ್ ಡೆವಲಪ್‌ಮೆಂಟ್ ಇಲಾಖೆಯಲ್ಲಿ ರೂಲ್ಸ್ ಮಾಡಂವಾಗಲೇ ಹೇಗೆ ಇದನ್ನು ಅಳವಡಿಸಂವುದಕ್ಕೆ ಸಾಧ್ಯ, ಸೀನಿಯಾರಿಟಿಯನ್ನು ಯಾವ ರೀತಿ ನಿಗದಿ ಮಾಡಬೇಕೆಂಬುದನ್ನು ಗೊತ್ತು ಮಾಡಬೇಕಾಗಿತ್ತು. ತಾಲ್ಲೂಕು ಬೋರ್ಡ್‌ಗಳಲ್ಲಿರ ತಕ್ಕ ಮೊದಲನೇ ದರ್ಜೆ ಗುಮಾಸ್ತರು, ಮ್ಯಾನೇಜರ್ ಮಂತ್ತು ಹೆಡ್ ಅಕೌಂಟೆಂಟುಗಳು ರೆವಿನ್ಯೂ ಇಲಾಖೆಯ ಯಾವ ಹುದ್ದೆಗಳಿಗೆ ಸರಿಸಮಾನರಾಗುತ್ತಾರೆಂಬುದನ್ನು ನಿಗದಿ ಮಾಡಬೇಕಾಗಿರುವುದರಿಂದ ಈ ವಿಚಾರ ಇಲಾಖೆಯಲ್ಲಿ ಚರ್ಚೆಯಾಗುತ್ತಿದೆ. ಇದೆಲ್ಲ ಆದಮೇಲೆ ಪೂರಾ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ. ಎಂ. ಸಜ್ಜನ್.—ನಾನಂ ಕೇಳುವುದು, ತಾಲ್ಲೂಕು ಬೋರ್ಡ್‌ನಲ್ಲಿ ಒಬ್ಬ ಕ್ಲಾರ್ಕ್ ಕೆಲಸ ಮಾಡುತ್ತಿದ್ದ ಎಂದರೆ, Can you not transfer the official to Revenue Department? Can the Office Superintendent not be transferred as Shirestedar as per Government Order? There is no necessity to wait for the Rules and Regulations.

ಶ್ರೀ ಎಸ್. ಹಂಚ್ಯಮಾಸ್ತಿಗೌಡ.—ಇಲ್ಲಿಯಂವರೆಗೆ ಪ್ರತ್ಯೇಕವಾಗಿದ್ದಂತಹ ಅಂದರೆ ತಾಲ್ಲೂಕು ಬೋರ್ಡಿನಲ್ಲಿದ್ದಂತಹ ಕೆಲವು ನೌಕರರು ಮಂತ್ತು ರೆವಿನ್ಯೂ ಇಲಾಖೆಯಲ್ಲಿದ್ದಂತಹ ನೌಕರ ವರ್ಗದವರಿಗೆ ಸೀನಿಯಾರಿಟಿ ಗೊತ್ತು ಮಾಡಂವುದು ಅವಶ್ಯಕ. ಉದಾಹರಣೆಗೆ, ತಾಲ್ಲೂಕು ಬೋರ್ಡ್‌ಗಳಲ್ಲಿರತಕ್ಕ ಮ್ಯಾನೇಜರ್ ಮಂತ್ತು ಹೆಡ್ ಅಕೌಂಟೆಂಟಿಗೆ ರೆವಿನ್ಯೂ ಇಲಾಖೆಯಲ್ಲಿರುವ ಶಿರಸ್ತೇದಾರ್ ಹುದ್ದೆ ಸರಿಸಮಾನವಾಗುತ್ತದೆಯೇ ಎನ್ನುವುದನ್ನೆಲ್ಲ ನಿಗದಿ ಮಾಡಬೇಕಾಗುತ್ತದೆ. ಜೊತೆಗೆ ಸಿ.ಇ.ಓ. ಎಂದು ಇದ್ದಾರೆ, ಅವರನ್ನು ಯಾವ ಹುದ್ದೆಗೆ ಸರಿಸಮಾನರಾಗುತ್ತಾರೆಂಬುದನ್ನು ನೋಡಬೇಕು. ಅವರನ್ನು ಅಬ್ಸಾರ್ಬ್ ಮಾಡಿದ ಮೇಲೆ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗ ಮಾಡಬೇಕಾಗಂತ್ತದೆ. ವರ್ಗ ಎಂದರೆ ರೆವಿನ್ಯೂ ಇಲಾಖೆಯಿಂದ ತಾಲ್ಲೂಕು ಬೋರ್ಡಿಗೆ ಮಂತ್ತು ತಾಲ್ಲೂಕು ಬೋರ್ಡಿನಿಂದ ರೆವಿನ್ಯೂ ಇಲಾಖೆಗೆ ಹಾಕಬೇಕಾಗಂತ್ತದೆ. ಆಗ ಅವರ ಸೀನಿಯಾರಿಟಿ ಎಲ್ಲ ಗೊತ್ತು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಇದನ್ನೆಲ್ಲ ನಿರ್ದಿಷ್ಟವಾಗಿ ಚರ್ಚೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳು ಒಂದು ತೀರ್ಮಾನಕ್ಕೆ ಬರುವವರೆಗೆ ಪೂರಾ ಇಂಪ್ಲಿಮೆಂಟ್ ಮಾಡುವುದು ಕಷ್ಟವಾಗುತ್ತದೆ.

---

† Indicate that remarks or speeches have not been revised by the member concerned.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದ ಕೊನೇ ಭಾಗದಲ್ಲಿ ಖಾಯಂ ವ್ಯವಸ್ಥೆ ಮಾಡುವ ತನಕ ತಾತ್ಕಾಲಿಕವಾಗಿ ಭೂಸುಧಾರಣೆಗಳ ಕೆಲಸವನ್ನು ಮಾಡುವುದಕ್ಕಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಗುಮಾಸ್ತೆ ಸಿಬ್ಬಂದಿಯನ್ನು ವರ್ಗಾಯಿಸುವಂತೆ ಜಿಲ್ಲಾಧಿಕಾರಿಯವರಿಗೆ ಸರ್ಕಾರದವರು ಆದೇಶಗಳನ್ನು ನೀಡಿದ್ದಾರೆ ಎಂದು ಹೇಳಿದ್ದಾರೆ. ಇದರಿಂದ ಖಾಯಂ ವ್ಯವಸ್ಥೆ ಮಾಡುತ್ತಾರೆ, ನೌಕರರನ್ನು ಕ್ರಮಗೊಳಿಸಬೇಕೆಂಬ ತತ್ವವನ್ನು ಒಪ್ಪಿಕೊಳ್ಳುತ್ತಾರೆಂದು ಅರ್ಥವಾಗುತ್ತದೆ ಈಗ ತಾಲ್ಲೂಕು ಬೋರ್ಡ್ ಸಿಬ್ಬಂದಿ ವರ್ಗವನ್ನು ನೇಮಕ ಮಾಡುವಾಗ ಅದನ್ನು ಕ್ರಮಗೊಳಿಸದೆ ಕ್ಲಾಸಿಫಿಕೇಷನ್ ಮಾಡಿ ಮಾಡಿದ್ದೀರಿ ಓ.ಓ.ಡಿ. ಎಂದು ಬೇರೆ ಬೇರೆ ಇಲಾಖೆಗಳ ಸಿಬ್ಬಂದಿ ವರ್ಗವನ್ನು ತೆಗೆದುಕೊಂಡು ಕೆಲಸ ಮಾಡಿದ್ದೀರಿ. ಈ ರೀತಿ ನೇಮಕ ಮಾಡುವಾಗ ನೇರವಾಗಿ ಕ್ಲಾಸಿಫಿಕೇಷನ್ ಮಾಡಿ ಸರ್ಕಾರದ ನಿಯಮಾವಳಿಗನುಗುಣವಾಗಿ ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಕೊಡಬೇಕೆಂಬ ತತ್ವವನ್ನು ಅನುಸರಿಸಿ ಕ್ರಮಗೊಳಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ನಾನು ಉತ್ತರ ಹೇಳಿದ್ದು ಅವೆ. ಇದನ್ನು ಅಬ್ಯಾರ್ಬ ಮಾಡ ಬೇಕೆಂದು ೨೮-೭-೧೯೭೬ರಲ್ಲಿ ಸರ್ಕಾರದ ಹುಕುಂ ಜಾರಿಯಾಗಿದೆ. ಅದಾದಮೇಲೆ ಅವಶ್ಯಕವಾಗಿ ಮಾಡಬೇಕಾದ ಕ್ರಮಗಳನ್ನೆಲ್ಲ ಮಾಡುವವರೆಗೆ ತಾತ್ಕಾಲಿಕವಾಗಿ ವರ್ಗ ಮಾಡಿ ಎಂದು ಹೇಳಿದೆ.

SRI M. M. SAJJAN.—Is it a fact thal the Divisional Commissioner, Belgaum has asked for clarification in respect of this Government order dated 28th July 1976 asking whether he can transfer the Taluk Board clerks and office Superintendents to the Revenue Department ?

ಶ್ರೀ ಎನ್. ಹುಚ್ಚಮಾಸ್ತಿಗೌಡ. —ಅವರು ಕ್ಲಾರಿಫಿಕೇಷನ್ ಕೇಳಿದ್ದಾರೆಯೋ ಇಲ್ಲವೋ ಎಂಬ ವಿವರ ನನ್ನ ಹತ್ತಿರ ಇಲ್ಲ ಸದ್ಯಕ್ಕೆ ತಾತ್ಕಾಲಿಕವಾಗಿ ವರ್ಗ ಮಾಡುವುದಕ್ಕೆ ಅವಕಾಶ ಇರುವುದರಿಂದ ಅದರಂತೆ ಎಲ್ಲ ಕಡೆಯು ವರ್ಗ ಮಾಡುತ್ತಿದ್ದಾರೆ ಈ ಬಗ್ಗೆ ಸರ್ಕಾರದವರು ಸಮಗ್ರವಾದ ಒಂದು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಂ. ಎಂ. ಸಜ್ಜನ್.—ತಾತ್ಕಾಲಿಕವಾಗಿ ಹರಿಜನ ಗಿರಿಜನರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿರುವುದಾಗಿ ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಅಂದರೆ ಯಾವ ಯಾವ ಲ್ಯಾಂಡ್ ರಿಫಾರಮ್ಸ್ ಕಛೇರಿಗಳಿಗೆ ಕ್ಲಾರ್ಕರುಗಳು ಬೇಕಾಗುತ್ತಾರೆ ಅಂಥ ಕಡೆಗಳಲ್ಲಿ ಟೆಂಪರರಿಯಾಗಿ ನೇಮಕಾತಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೀರೆಂದು ಅರ್ಥವಾಗುತ್ತದೆ. ಹಾಗಾದರೆ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹರಿಜನ ಗಿರಿಜನರನ್ನು ನೇಮಕಾತಿ ಮಾಡಿದ್ದಾರೆಂಬ ಬಗ್ಗೆ ಅಂಕಿ ಅಂಶಗಳನ್ನು ತಿಳಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ಪ್ರಶ್ನೆಗಳು ಒಂದೇ ಪ್ರಶ್ನೆಯಲ್ಲಿ ಅಡಕವಾಗಿವೆ. ಒಂದನೇಯದು, ತಾಲ್ಲೂಕು ಬೋರ್ಡಿನಲ್ಲಿರ ತಕ್ಕ ಅಧಿಕಾರಿ ವರ್ಗವನ್ನು ರೆವಿನ್ಯೂ ಇಲಾಖೆಯ ಸಿಬ್ಬಂದಿಯೋಜನೆ ಮರ್ಜ್ ಮಾಡಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡತಕ್ಕದ್ದು. ಎರಡನೆಯದು, ತಾಲ್ಲೂಕು ಆಫೀಸಿನಲ್ಲಿ ಇರತಕ್ಕ ಸಿಬ್ಬಂದಿ ವರ್ಗ ಸಾಲದೆ ಇದ್ದ ಪಕ್ಷದಲ್ಲಿ ತಾತ್ಕಾಲಿಕವಾಗಿ ಹೆಡ್ಕೂಲ್ಡ್ ಕ್ಯಾಸ್ಟ್ ಮತ್ತು ಹೆಡ್ಕೂಲ್ಡ್ ಟ್ರೈಬ್ಸ್ ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಳ್ಳಬಹುದೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಹಾಲಿ, ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಕೂಡದೆಂದು ಸರ್ಕಾರದ ಕಟ್ಟಾಜ್ಞೆ ಇದ್ದರೂ ಕೂಡ ಈ ಸಂದರ್ಭದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳನ್ನು ತಾಲ್ಲೂಕು ಆಫೀಸಿನಲ್ಲಿ ಖಾಲಿ ಇರತಕ್ಕ ಹುದ್ದೆಗಳಿಗೆ ತೆಗೆದುಕೊಳ್ಳಬಹುದೆಂದು ಆದೇಶ ನೀಡಲಾಗಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್. —ತಾವು, ಲ್ಯಾಂಡ್ ರಿಫಾರಮ್ಸ್‌ನಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತಾಲ್ಲೂಕು ಬೋರ್ಡ್ ನೌಕರರನ್ನು ತೆಗೆದು ಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಯಾವ ಲ್ಯಾಂಡ್ ರಿಫಾರಮ್ಸ್ ಇಲಾಖೆಯಲ್ಲಿ ನೋಡಿದರೂ ಒಬ್ಬ ಹರಿಜನ ಗಿರಿಜನ ಅಭ್ಯರ್ಥಿಯನ್ನು ನೇಮಕ ಮಾಡಿಲ್ಲ. ಇದು ನಿಜವಾದ ವಿಷಯ. ಈ ಆಜ್ಞೆಯನ್ನು ಜಾಗೃತಿ ಮಾಡಿ ಇನ್ನೂ ಮುಂದೆಯಾದರು ನೇಮಕ ಮಾಡುವುದಕ್ಕೆ ಅವಕಾಶಮಾಡಿ ಸೋಷಿಯಲ್ ಜಸ್ಟೀಸ್ ಸೃಷ್ಟಿ ಮಾಡಿ ಸ್ವಾಮಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಈಗ ಕೇಳಿದ ಪ್ರಶ್ನೆಯನ್ನು ಪ್ರತ್ಯೇಕವಾಗಿ ಹಾಕಿದರೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಮಂದಿ ಹರಿಜನ ಗಿರಿಜನ ಮತ್ತು ಹಿಂದುಳಿದ ಅಭ್ಯರ್ಥಿಗಳನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಂತ್ತೇನೆ.

Sri Bhumadeswara Swamy Mutt High School

288. SRI M. NANJE GOWDA (Gandasi).—Will the Minister for Revenue be pleased to state:—

(*a*) the date on which the Sree Bhumadeswara Swamy Mutt High School Committee of Bidaradahalli Village, Salagame, Hobli Hassan Taluk was registered as per Societies Registration Act;

(*b*) the total subscription collected by this Committee by way of public contributions;

(*c*) whether it is a fact that the Committee has committed fraud on the public by not taking into account the amount of about Rs. 60-70 thousand collected by way of public contribution;

(*d*) whether any complaints have been received from the public in this regard;

(*e*) if so, the steps taken by the Government in this matter?

SRI N. HUTCHAMASTHY GOWDA (Minister for Revenue).—

(*a*) Dated 24th December 1973.

(*b*) This Committee has not submitted the annual statement of accounts.

(*c*) An Enquiry Officer has been appointed.

(*d*) Yes.

(*e*) Necessary action will be taken on the report of the Enquiry Officer, who has been appointed for this purpose.

ಶ್ರೀ ಎಂ. ನಂಜೇಗೌಡ.—ಈ ಕಮಿಟಿಯು ಸೊಸೈಟಿಯ ಆಕ್ಟ್ ಪ್ರಕಾರ ಹೆಸರನ್ನು ನೋಂದಾಯಿಸಿಕೊಂಡು ನಾಲ್ಕು ವರ್ಷ ಕಳೆದಿದ್ದರೂ ಅದರ ಲೆಕ್ಕಪತ್ರಗಳನ್ನು ಇದುವರೆಗೂ ಕಳುಹಿಸುವುದಕ್ಕೆ ಏಕೆ ಸಾಧ್ಯವಾಗಿಲ್ಲ ಎನ್ನುವುದನ್ನು ತಿಳಿಸಂತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅವರು ಲೆಕ್ಕಪತ್ರಗಳನ್ನು ಇನ್ನೂ ಸರ್ಕಾರಕ್ಕೆ ಕಳಂಹಿಸಿಲ್ಲ. ಇದಕ್ಕೋಸ್ಕರ ಒಬ್ಬ ಎನ್‌ಕ್ವೈರಿ ಆಫೀಸರನ್ನು ನೇಮಕ ಮಾಡಿದ್ದೇವೆ ಅವರಿಂದ ವರದಿ ಬಂದಮೇಲೆ ಮುಂದಿನ ಕ್ರಮ ಏನು ಕಾನೂನು ಪ್ರಕಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ನಂಜೇಗೌಡ.—ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದು ಯಾವಾಗ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೂರುಗಳು ಸರ್ಕಾರಕ್ಕೆ ಬಂದಿದ್ದರ ಮೇಲೆಯೇ ನಾವು ಎನ್‌ಕ್ವೈರಿ ಆಫೀಸರ್‌ನ್ನು ನೇಮಕ ಮಾಡಿದ್ದೇವೆ.